(21)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ ಇವರು ನಿಯಮ-330 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ವಿಷಯ:**

ಮೈಸೂರು ಆರ್.ಟಿ.ಓ. ಕಛೇರಿಯಲ್ಲಿ ಹಣ ಕೊಟ್ಟವರಿಗೆ ನಕಲಿ ಡ್ರೈವಿಂಗ್ ಲೈಸೆನ್ಸ್ (ಡಿಎಲ್) ಕೊಡುತ್ತಿದ್ದ ದಂಧೆಕೋರರ ಬಗ್ಗೆ ಸಾಕ್ಷ್ಯಾಧಾರ ಸಿಕ್ಕಿ ಮೈಸೂರಿನ ಲಕ್ಷ್ಮೀಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿ 5 ತಿಂಗಳು ಸಮೀಪಿಸುತ್ತಿದ್ದರೂ ಈವರೆಗೆ ಪ್ರಕರಣದ ತನಿಖೆ ಟೇಕಾಫ್ ಆಗಿಲ್ಲ. ಈವರೆಗೆ ಯಾರೊಬ್ಬರ ವಿಚಾರಣೆಯನ್ನೂ ನಡೆಸಿಲ್ಲ. ಯಾರನ್ನು ಬಂಧಿಸಿಯೂ ಇಲ್ಲ. ಈ ಮಧ್ಯೆ ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಬೇಕಿರುವ ಹಿನ್ನೆಲೆಯಲ್ಲಿ ದೂರಿನಲ್ಲಿ ನಮೂದಿಸಿರುವ ಪಶ್ಚಿಮ ಆರ್‌ಟಿಓ ಅಧಿಕಾರಿಯ ಹೆಸರು ಮತ್ತು ಹುದ್ದೆಯ ಮಾಹಿತಿ ನೀಡುವಂತೆ ದೂರುದಾರರಿಗೆ ಪೊಲೀಸರು 5ನೇ ನೋಟಿಸ್ ಜಾರಿ ಮಾಡಿದ್ದಾರೆ. ಈ ಕೃತ್ಯದಿಂದ ಕೇರಳ ಸೇರಿ ಹೊರರಾಜ್ಯದವರಿಗೆ ನಕಲಿ ಕಾರ್ಡ್‌ಗಳನ್ನು ಮಾಡಿಕೊಡಲಾಗಿದೆ. ಬರೀ ಹಣ ಕೊಟ್ಟರೆ ಆ ವ್ಯಕ್ತಿಯ ಫೋಟೋ ಪಡೆದು ಅದನ್ನು ಕಾರ್ಡ್‌ನ ಮೇಲೆ ಅಂಟಿಸಿ, ಆರ್‌ಟಿಓ ಹಾಗೂ ಗ್ರಾಹಕರ ಡಿಜಿಟಲ್ ಸಹಿ ನಕಲಿ ಮಾಡಲಾಗುತ್ತದೆ. ಕೆಲವೇ ದಿನಗಳಲ್ಲಿ ಡಿಎಲ್ ಹಣ ಕೊಟ್ಟವರ ಕೈಗೆ ನೀಡಲಾಗಿದೆ. ಕಾರ್ಡ್‌ನಲ್ಲಿರುವ ಯಾವುದೇ ವಿವರಗಳು ಅಸಲಿಯಾಗಿರುವುದಿಲ್ಲ. ಆರ್‌ಟಿಓ ಅಧಿಕಾರಿಗಳ ಸಹಕಾರವಿಲ್ಲದೆ ದಂಧೆ ನಡೆಸಲು ಸಾಧ್ಯವಿಲ್ಲ. ಈ ವಿಷಯ ಬಹಳ ಗಂಭೀರವಾಗಿದ್ದು, ಇದನ್ನು ಮಾನ್ಯ ಸಾರಿಗೆ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

**ಉತ್ತರ:**

ಮೈಸೂರಿನಲ್ಲಿ ನಕಲಿ ಡ್ರೈವಿಂಗ್ ಲೈಸೆನ್ಸ್ ವಿತರಣೆ ಜಾಲ ಪತ್ತೆ ಎಂಬ ಶೀರ್ಷಿಕೆಯಡಿ ವಿಜಯವಾಣಿ ದಿನ ಪತ್ರಿಕೆಯಲ್ಲಿ ದಿನಾಂಕ: 07-01-2023 ರಂದು ಪ್ರಕಟವಾಗಿರುವ ವರದಿಯನ್ನಾಧರಿಸಿ, ಈ ಬಗ್ಗೆ ಪರಿಶೀಲಿಸಿ ವಿಚಾರಣೆ ನಡೆಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ನಿಖರವಾದ ವರದಿಯನ್ನು ಅವಶ್ಯ ದಾಖಲೆಗಳೊಂದಿಗೆ ಸಲ್ಲಿಸುವಂತೆ ಅಪರ ಸಾರಿಗೆ ಆಯುಕ್ತರು (ಪ್ರವರ್ತನ) (ದಕ್ಷಿಣ), ಬೆಂಗಳೂರು ಇವರನ್ನು ಕೋರಲಾಗಿರುತ್ತದೆ.

ಅದರಂತೆ ಅಪರ ಸಾರಿಗೆ ಆಯುಕ್ತರು (ಪ್ರವರ್ತನ) (ದಕ್ಷಿಣ) ಇವರು ಸಲ್ಲಿಸಿರುವ ವರದಿಯನ್ನಾಧರಿಸಿ ಮೈಸೂರು (ಪಶ್ಚಿಮ) ಕಛೇರಿಯ ಸಂಬಂಧಪಟ್ಟ ಅಧಿಕಾರಿ / ನೌಕರರುಗಳಿಗೆ ಕಾರಣ ಕೇಳಿ ನೋಟೀಸುಗಳನ್ನು ಜಾರಿಗೊಳಿಸಲಾಗಿರುತ್ತದೆ. ಸದರಿ ನೋಟೀಸುಗಳಿಗೆ ನೀಡಿರುವ ವಿವರಣೆಗಳನ್ನು ಪರಿಶೀಲಿಸಿ, ಸದರಿ ಪ್ರಕರಣದ ಕುರಿತಂತೆ ಸತ್ಯಾಸತ್ಯತೆಗಳನ್ನು ಕಂಡುಕೊಳ್ಳುವ ಸಲುವಾಗಿ ವಿಚಾರಣೆ ಕೈಗೊಳ್ಳುವ ಬಗ್ಗೆ ಆಯುಕ್ತರಿಂದ ದಿನಾಂಕ:30-06-2023 ರಂದು ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳಲಾಗುವುದು.

ಟಿಡಿ 31 ಟಿಡಿಕ್ಯೂ 2023

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.